# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 634 |
| ಉತ್ತರಿಸಬೇಕಾದ ದಿನಾಂಕ | : 23.12.2022 |
| ಸದಸ್ಯರ ಹೆಸರು | : ಡಾ. ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |

<table>
<tr><th>ಕ್ರಸ</th><th>ಪ್ರಶ್ನೆ</th><th colspan="2">ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು;</td><td colspan="2">ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿ ಕಲಬುರಗಿ ಜಿಲ್ಲೆಯಲ್ಲಿ 8 ಕ್ರೀಡಾಂಗಣಗಳು ಮತ್ತು ಯಾದಗಿರಿ ಜಿಲ್ಲೆಯಲ್ಲಿ 4 ಕ್ರೀಡಾಂಗಣಗಳು ಒಟ್ಟು 12 ಕ್ರೀಡಾಂಗಣಗಳಿವೆ.</td></tr>
<tr><td rowspan="3">ಆ)</td><td rowspan="3">ಸದರಿ ಜಿಲ್ಲೆಗಳಲ್ಲಿರುವ ಎಲ್ಲಾ ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆಯೇ;</td><td colspan="2">ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಿಸಿದ ವಿವರಗಳು ಕೆಳಕಂಡಂತಿವೆ.</td></tr>
<tr><td>ಕಲಬುರಗಿ</td><td>ಜೇವರ್ಗಿ, ಚಿತ್ತಾಪೂರ ಮತ್ತು ಸೇಡಂ ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ.<br><br>ಆಳಂದ, ಅಫ್ಜಲ್ ಪೂರ, ಚಿಂಚೋಳಿ, ಮಹಾಗಾಂವ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.<br><br>ನೂತನ ತಾಲ್ಲೂಕುಗಳಾದ ಶಾಬಾದ, ಯಡ್ರಾಮಿ, ಕಾಳಗಿ ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಬೇಕಾಗಿದ್ದು, ಇಲ್ಲಿಯವರೆಗೂ ಸೂಕ್ತ ನಿವೇಶನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರವಾಗಿರುವುದಿಲ್ಲ.</td></tr>
<tr><td>ಯಾದಗಿರಿ</td><td>ಗುರುಮಿಠಕಲ್ ಹಾಗೂ ಶಾಹಾಪೂರ ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ.<br><br>ಸುರಪುರ ತಾಲ್ಲೂಕು ಕ್ರೀಡಾಂಗಣ ಕಾಮಗಾರಿ ಪ್ರಗತಿಯಲ್ಲಿದೆ.<br><br>ನೂತನ ತಾಲ್ಲೂಕುಗಳಾದ ಹುಣಸಿಗಿ ಹಾಗೂ ವಡಗೇರಾ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಬೇಕಾಗಿದೆ.</td></tr>
</table>

| | | |
|---|---|---|
| ಇ) | ತಾಲ್ಲೂಕುಗಳಲ್ಲಿನ ಕ್ರೀಡಾಂಗಣದಲ್ಲಿ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು; | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿನ ತಾಲ್ಲೂಕು ಕ್ರೀಡಾಂಗಣಗಳಲ್ಲಿ ನೆಲಸಮತಟ್ಟು ಕಾಮಗಾರಿ, ಕ್ರೀಡಾ ಅಂಕಣಗಳ ನಿರ್ಮಾಣ, ಆವರಣ ಗೋಡೆ/ತಂತಿ ಬೇಲಿ, ಶೌಚಾಲಯಗಳು, ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಪೆವಿಲಿಯನ್ ಕಟ್ಟಡ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಆದ್ಯತೆ ನೀಡಲಾಗುತ್ತಿದೆ.<br><br>ಅನುದಾನದ ಕೊರತೆಯಿಂದಾಗಿ ಎಲ್ಲಾ ತಾಲ್ಲೂಕು ಕ್ರೀಡಾಂಗಣಗಳಲ್ಲಿ ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ. |
| ಈ) | ಯಾವ್ಯಾವ ಕ್ರೀಡಾಂಗಣದಲ್ಲಿ ಯಾವ ಯಾವ ಮೂಲಭೂತ ಸೌಕರ್ಯಗಳ ಕೊರತೆ ಇದೆ; (ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿನ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳಲ್ಲಿ ಲಭ್ಯವಿರುವ ಪ್ರಮುಖ ಸೌಲಭ್ಯಗಳು ಹಾಗೂ ಕೊರತೆಯಿರುವ ಮೂಲ ಸೌಲಭ್ಯಗಳ ಪಟ್ಟಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಉ) | ಕೊರತೆ ಇರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ವಹಿಸಲಾಗುವುದೇ? | ಅನುದಾನದ ಲಭ್ಯತೆ ಆಧರಿಸಿ, ಆದ್ಯತೆ ಮೇರೆಗೆ ಎಲ್ಲಾ ತಾಲ್ಲೂಕು ಕ್ರೀಡಾಂಗಣಗಳಲ್ಲಿ ಕೊರತೆಯಿರುವ ಮೂಲಭೂತ ಸೌಕರ್ಯಗಳನ್ನು ಹಂತ-ಹಂತವಾಗಿ ಕಲ್ಪಿಸಲು ಪರಿಗಣಿಸಲಾಗುವುದು. |

ವೈಎಸ್‌ಡಿ-ಇಬಿಬಿ/181/2022

**(ಡಾ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ
ಸಚಿವರು

# ಅನುಬಂಧ

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ತಾಲೂಕು ಕ್ರೀಡಾಂಗಣಗಳಲ್ಲಿ ಲಭ್ಯವಿರುವ ಹಾಗೂ ಕೊರತೆಯಿರುವ ಮೂಲಭೂತ ಸೌಲಭ್ಯಗಳ ಪಟ್ಟಿ

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಮೂಲಭೂತ ಸೌಲಭ್ಯಗಳು | | | | | |
|---|---|---|---|---|---|---|---|---|
| | | | ಶೌಚಾಲಯಗಳು | ನೀರು ಸರಬರಾಜು | ವಿದ್ಯುತ್ | ಕಾಂಪೌಂಡ್ ಗೋಡೆ | ಕ್ರೀಡಾ ಅಂಕಣಗಳು | ಫೆವಿಲಿಯನ್ ಕಟ್ಟಡ |
| 1 | 2 | 3 | 4 | 5 | 6 | 7 | 8 | 9 |
| 1. | ಕಲಬುರಗಿ | ಚಿಂಚೋಳಿ | ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. | | | | | |
| | | ಚಿತ್ತಾಪುರ | ಇದೆ | ಇದೆ | ಇಲ್ಲ | ಇಲ್ಲ | ಇದೆ | ಇದೆ |
| | | ಅಫಜಲ್ ಪುರ | ಇದೆ | ಇದೆ | ಇಲ್ಲ | ಇದೆ | ಇದೆ | ಪ್ರಗತಿಯಲ್ಲಿದೆ. |
| | | ಆಳಂದ | ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. | | | | | |
| | | ಜೇವರ್ಗಿ | ಇಲ್ಲ | ಇಲ್ಲ | ಇದೆ | ಇದೆ | ಇಲ್ಲ | ಇದೆ |
| | | ಸೇಡಂ | ಇದೆ | ಇದೆ | ಇದೆ | ಇಲ್ಲ | ಇಲ್ಲ | ಇದೆ |
| | | ಕಮಲಾಪುರ (ಮಹಗಾಂವ್) | ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. | | | | | |
| 2. | ಯಾದಗಿರಿ | ಗುರುಮಿಠಕಲ್ | ಇದೆ | ಇದೆ | ಇದೆ | ಇಲ್ಲ | ಇಲ್ಲ | ಇದೆ |
| | | ಶಹಾಪುರ | ಇದೆ | ಇದೆ | ಇದೆ | ಇಲ್ಲ | ಇಲ್ಲ | ಇದೆ |
| | | ಸುರಪುರ | ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. | | | | | |
| | | ಹುಣಸಗಿ | 2022-23ನೇ ಸಾಲಿನಲ್ಲಿ ನಿವೇಶನ ಹಸ್ತಾಂತರ ಮಾಡಿಕೊಳ್ಳಲಾಗಿದ್ದು, ಕ್ರೀಡಾಂಗಣ ನಿರ್ಮಿಸಬೇಕಾಗಿದೆ. | | | | | |